# <u>4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು</u>

ಎಸ್‌ಸಿ. 245/2023

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಶ್ರೀ ಪ್ರಕಾಶ್.ಜಿ | <u>ಪ್ರಮಾಣ ಮಾಡಿಸಿದ ದಿನಾಂಕಃ</u> |
| ತಂದೆ/ಗಂಡನ ಹೆಸರು | ಃ | ಶ್ರೀ ಗವಿಗೌಡ | **23.01.2025** |
| ವಯಸ್ಸು | ಃ | 33 ವರ್ಷ | |
| ವೃತ್ತಿ | ಃ | ಪಿ.ಸಿ, ಕುವೆಂಪುನಗರ ಪೋಲೀಸ್ ಠಾಣೆ | **ಪ್ರಾ.ಸಾ. ಃ 08** |
| ವಾಸಸ್ಥಳ | ಃ | ಗೋಪಾಲಪುರ | **ಚಾ.ಸಾ. ಃ 15** |

<u>ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ</u>

. ನಾನು *2019* ರಿಂದ *2024* ರವರೆಗೆ ಮೇಟಗಳ್ಳಿ ಪೋಲೀಸ್ ಠಾಣೆಯಲ್ಲಿ ಪಿ.ಸಿ ಆಗಿ ಕೆಲಸ ಮಾಡಿದ್ದೇನೆ. ದಿಃ*16.03.2023* ರಂದು ನನ್ನನ್ನು ಹಗಲು ಕರ್ತವ್ಯಕ್ಕೆ ನೇಮಿಸಿದ್ದರು. ಆ ಕಾಲಕ್ಕೆ ಆರೋಪಿಯಾದ ಆದಿತ್ಯಗೌಡ ಇವರನ್ನು ಮಹಜರ್ ಗೆ ಕರೆದುಕೊಂಡು ಕುಂಬಾರಕೊಪ್ಪಲು *60* ಅಡಿ ರಸ್ತೆಗೆ ಹೋಗಿದ್ದೆ. ಆ ಕಾಲಕ್ಕೆ ಆರೋಪಿತ ನಿರ್ಮಾಣ ಹಂತದ ಕಟ್ಟಡದ ಮುಂದಗಡೆ ಇಟ್ಟಿದ್ದ ಒಂದು ಡ್ರ್ಯಾಗರ್ ಅನ್ನು ಹಾಜರುಪಡಿಸಿ ಅದೇ ಆಯುದದಿಂದ ತಾನು ಕೃತ್ಯ ಎಸಗಿರುವುದಾಗಿ ಹೇಳಿದ್ದ. ಆ ಡ್ರ್ಯಾಗರ್ ಅನ್ನು ಮಹಜರ್ ಮಾಡಿ ವಶಕ್ಕೆ ಪಡೆದಿದ್ದರು. ಆ ಮಹಜರ್ ಅನ್ನು ಮದ್ಯಾಹ್ನ *12.05* ರಿಂದ *1.15* ರವರೆಗೆ ಅಮಾನತ್ತು ಮಹಜರ್ ಮಾಡಿದ್ದರು. ನಂತರ ಆರೋಪಿತನನ್ನು ವೈದ್ಯಕೀಯ ತಪಾಸಣೆ ಮಾಡಿಸಿ ಜೈಲಿಗೆ ಹಾಜರುಪಡಿಸಿದ್ದೆ. ಆ ಕಾಲಕ್ಕೆ ಸ್ವಇಚ್ಛೆಯಿಂದ ಡ್ರ್ಯಾಗರ್ ಅನ್ನು ಅಲ್ಲಿ ಇಟ್ಟಿರುವುದಾಗಿ ಆ ಸ್ಥಳಕ್ಕೆ ಕರೆದುಕೊಂಡು

ಹೋಗಿದ್ದ. ಆ ಪಂಚನಾಮೆಗೆ ನಾನು ಸಹಿ ಹಾಕಿದ್ದೆ. ಈಗ ನಾನು ನೋಡುತ್ತಿರುವ ನಿ.ಪಿ-*13* ಮಹಜರ್ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿ.ಪಿ-*13(ಬಿ)* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಎಂ.ಒ-*2* ಡ್ರ್ಯಾಗರ್ ಆ ದಿನ ಅಮಾನತ್ತು ಪಡಿಸಿಕೊಂಡ ಡ್ರ್ಯಾಗರ್ ಇದೆ. ಕೋರ್ಟ್ ಮುಂದೆ ಇರುವ ಆರೋಪಿತನೇ ಆ ದಿನ ಡ್ರ್ಯಾಗರ್ ಹಾಜರುಪಡಿಸಿದ್ದ ವ್ಯಕ್ತಿ ಇರುತ್ತಾನೆ. ಈ ಬಗ್ಗೆ ನಾನು ಹೇಳಿಕೆ ಕೊಟ್ಟಿದ್ದೇನೆ. ಅಮಾನತ್ತು ಕಾಲಕ್ಕೆ ಆ ಡ್ರ್ಯಾಗರ್ ಗೆ ಸ್ವಲ್ಪ ರಕ್ತದ ಕಲೆಯಿತ್ತು. ನಿ.ಪಿ-*14* ರಿಂದ *16* ಪೋಟೋಗಳನ್ನು ಅದೇ ಸ್ಥಳದಲ್ಲಿ ತೆಗೆದಿದ್ದರು.

<u>ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಟಿ.ಹೆಚ್.ಕೆ ರವರಿಂದಃ-</u>

*2.* ನನಗೆ ಆ ದಿನ ಮಹಜರ್ ಗೆ ಆರೋಪಿತನನ್ನು ಕರೆದುಕೊಂಡು ಹೋಗುವಂತೆ ಲಿಖಿತವಾಗಿ ನೋಟಿಸ್ ಕೊಟ್ಟಿರಲಿಲ್ಲ. ದಿಃ*16.03.2023* ರಂದು ಠಾಣೆಯಲ್ಲಿ ನಾನು, ಎಸ್.ಹೆಚ್.ಒ, ತನಿಖಾಧಿಕಾರಿ, ಸೆಂಟ್ರಿ ಹಾಜರಿದ್ದವು. ಆ ಕಾಲಕ್ಕೆ ಬೇರೆ ಖಾಸಗಿ ವ್ಯಕ್ತಿಗಳು ಹಾಜರಿರಲಿಲ್ಲ. ಸಾಕ್ಷಿದಾರರಾದ ಅಮೃತ್ ಮತ್ತು ನಂಜುಂಡಸ್ವಾಮಿ ಹಾಜರಿದ್ದರು. ಆ ಸಾಕ್ಷಿದಾರರಿಗೆ ನನ್ನ ಮುಂದೆ ನೋಟಿಸ್ ಕೊಟ್ಟಿಲ್ಲ. ಆ ದಿನ ನಾವು ಠಾಣೆಯಿಂದ ಹೊರಟಾಗಿ ಮಧ್ಯಾಹ್ನ *12* ಗಂಟೆಯಾಗಿತ್ತು. ಆ ದಿನ ಆರೋಪಿ ಕರೆದುಕೊಂಡು ಹೋಗಿದ್ದ ಸ್ಥಳದ ಮನೆ ನಂಬರ್ ಗೊತ್ತಿಲ್ಲ. ಪೋಟೋದಲ್ಲಿ ಕಾಣುವಂತ ನಿರ್ಮಾಣ ಹಂತದ ಕಟ್ಟಡಗಳು ಬಹಳಷ್ಟು ಇವೆ ಎಂದರೆ ಆ ಸ್ಥಳದಲ್ಲಿ ಇರಲಿಲ್ಲ. ಆ ಸ್ಥಳದ ಮಾಲೀಕರ ಹೆಸರು ನಾನು ತಿಳಿದುಕೊಂಡಿಲ್ಲ. ಆ ಸ್ಥಳದ ಮಾಲೀಕರಿಗೆ ನೋಟಿಸ್ ಕೊಟ್ಟು ಕರೆಸಲು ತೊಂದರೆ ಇರಲಿಲ್ಲ. ನಾವು ಹೋಗಿದ್ದ ಜೀಪಿನಲ್ಲಿ *5-6* ಮಂದಿ ಕುಳಿತುಕೊಳ್ಳಬಹುದು. ಜೀಪ್ ಅನ್ನು ಜೀಪಿನ ಚಾಲಕ ಚಲಾಯಿಸಿದ್ದ. ಜೀಪ್ ಚಾಲಕರ ಹೆಸರು

ರವೀಂದ್ರ ಆ ಬಗ್ಗೆ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಇರಬಹುದು. ಡ್ರ್ಯಾಗರ್ ಅನ್ನು ಗುರುತಿಸಲು ಇದ್ದ ಗುರುತುಗಳ ಬಗ್ಗೆ ಹೇಳಿಕೆಯಲ್ಲಿ ನಮೂದು ಇಲ್ಲ ಎಂದರೆ ನಿಜ. ಕಬ್ಬಿಣದ ಹಿಡಿಯ ಮೇಲೆ ಸ್ಟಿಕರ್ ಗಳು ಇದ್ದ ಬಗ್ಗೆ ಹೇಳಿಕೆಯಲ್ಲಿ ನಮೂದು ಇಲ್ಲ ಎಂದರೆ ನಿಜ. ಎಂ.ಒ-2 ರಂತ ಡ್ರ್ಯಾಗರ್ ಅಂಗಡಿಗಳಲ್ಲಿ ದೊರೆಯುತ್ತವೆ ಎಂದರೆ ನನಗೆ ಗೊತ್ತಿಲ್ಲ. ನಾನು ಕುಂಬಾರಕೊಪ್ಪಲು 60 ಅಡಿ ರಸ್ತೆಯಲ್ಲಿರುವ ಸ್ಥಳಕ್ಕೆ ಹೋಗೆ ಇಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲೇ ಎಲ್ಲಾ ದಾಖಲೆ ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಹೇಳಿಕೆಯಲ್ಲಿ ಮತ್ತು ಮಹಜರ್ ನಲ್ಲಿ ಆ ಸ್ಥಳ ಠಾಣೆಯಿಂದ ಎಷ್ಟು ದೂರ ಎಂದು ನಮೂದು ಇಲ್ಲ ಎಂದರೆ ನಿಜ. ಎಂ.ಒ-2 ಅನ್ನು ಈ ಕೇಸಿಗೊಸ್ಕರ ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಒತ್ತಾಯದ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ಠಾಣೆಯಲ್ಲೇ ತಯಾರಿಸಿದ್ದಾರೆ ಎಂದರೆ ಸರಿಯಲ್ಲ. ಮಹಜರ್ ಅನ್ನು ಬರೆದ ಸ್ಥಳದ ಬಗ್ಗೆ ನಿ.ಪಿ-13 ರಲ್ಲಿ ನಮೂದು ಇಲ್ಲ ಎಂದರೆ ಸರಿಯಲ್ಲ.

**ಈ ವೇಳೆಗೆ ಸರ್ಕಾರಿ ಅಭಿಯೋಜಕರು ಹೇಳಿಕೆಯಲ್ಲಿ ಮತ್ತು ಮಹಜರ್ ನಲ್ಲಿ ಡ್ರ್ಯಾಗರ್ ನ ಗುರುತುಗಳ ಬಗ್ಗೆ ಇಲ್ಲ ಎಂದು ಹೇಳಿದ್ದರಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಮನವಿ ಮಾಡಿದ್ದು ಸೂಕ್ತ ಕಾರಣ ಹೇಳದೇ ಇದುದ್ದರಿಂದ ಮನವಿಯನ್ನು ತಿರಸ್ಕರಿಸಲಾಗಿದೆ**

ಮರು ವಿಚಾರಣೆ:- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು